ಕರ್ನಾಟಕ ಸರ್ಕಾರ

**ಔಷಧ ನಿಯಂತ್ರಣ ಇಲಾಖೆ**

ಸಂಖ್ಯೆ: ಔನಿಇ/ಸಔನಿಕ/ಬೆಂ.ವೃತ್ತ-4/ 138. /2020-21

ಸಹಾಯಕ ಔಷಧ ನಿಯಂತ್ರಕರ ಕಚೇರಿ,
ಬೆಂಗಳೂರು ವೃತ್ತ-04, ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:25/06/2020

ಇವರಿಗೆ,
**ಮೆ॥ ಸೌಜನ್ಯ ಮೆಡಿಕಲ್ಸ್,**
**ಸೈಟ್ ನಂ-33, ಶಾಪ್ ನಂ-1, ಸುಬ್ರಮಣ್ಯಪುರ ಮುಖ್ಯರಸ್ತೆ,**
**ಬನಶಂಕರಿ 2ನೇ ಹಂತ, ಕದಿರೇನಹಳ್ಳಿ,**
**ಬೆಂಗಳೂರು-560 070.**

ಮಾನ್ಯರೆ,

ವಿಷಯ: ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940 ಮತ್ತು ಅದರ ನಿಯಮಾವಳಿಗಳ ಅಡಿ ಪರವಾನಗಿಗಳನ್ನು ಅಮಾನತ್ತುಗೊಳಿಸಿರುವ ಬಗ್ಗೆ.

ಉಲ್ಲೇಖ: 1) ಪರಿವೀಕ್ಷಣಾ ವರದಿ ದಿನಾಂಕ: 27/05/2020.
2) ಈ ಕಚೇರಿಯ ಕಾರಣ ಕೇಳುವ ನೋಟೀಸ್ ಪತ್ರ ಸಂಖ್ಯೆ: ದಿನಾಂಕ:27/05/2020

*****

<u>ಪ್ರಸ್ತಾವನೆ:</u>

ಕರ್ನಾಟಕ ಸರ್ಕಾರ, The Karnataka Epidemic Disease (Covid-19) Regulation – 2020 ರಡಿ ಸುತ್ತೋಲೆ ಹೊರಡಿಸಿ ಎಲ್ಲಾ ಔಷಧ ವ್ಯಾಪಾರಸ್ಥರು, ಜ್ವರ, ನೆಗಡಿ, ಕೆಮ್ಮು ಮುಂತಾದ ಔಷಧ ಮಾರಾಟ ವಿವರಗಳನ್ನು ಸಲ್ಲಿಸಲು ಆದೇಶಿಸಿದ ಮೇರೆಗೆ ರಾಜ್ಯ ಔಷಧ ನಿಯಂತ್ರಕರು ಆದೇಶ ನೀಡಿ, ಔಷಧ ವ್ಯಾಪಾರಸ್ಥರು, ಮೇಲೆ ತಿಳಿಸಿದ ಔಷಧಗಳ ಖರೀದಿದಾರರ ವಿವರಗಳನ್ನು <u>https://pharma.karnataka.tech</u> ವೆಬ್ ಅಪ್ಲಿಕೇಶನಲ್ಲಿ ಅಳವಡಿಸುವ ಕುರಿತು XLNDCD ಮೂಲಕ ಮಾಹಿತಿ ನೀಡಿರುತ್ತಾರೆ.

ತದನಂತರ ದಿನಾಂಕ:07/05/2020 ರಂದು ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಗೆ SMS/Whatsapp ಮೂಲಕ User ID ಮತ್ತು Password ಕಳುಹಿಸಲಾಗಿತ್ತು. ತದನಂತರ ವೈಯಕ್ತಿಕ ಕರೆ ಮಾಡಿ ಮತ್ತು ನಿಮ್ಮ ಸಂಸ್ಥೆಗೆ ಭೇಟಿ ನೀಡಿ, ವಿಧಾನ ತಿಳಿಸಲಾಗಿತ್ತು. ಕೋರೋನಾ ಸಾಂಕ್ರಾಮಿಕ ರೋಗದ ಪ್ರಾಥಮಿಕ ಲಕ್ಷಣಗಳನ್ನು ಗುರುತಿಸಲು ನೀವು ನೀಡುವ ಮಾಹಿತಿಯು ಅತ್ಯಂತ ಮಹತ್ವದಾಗಿರುತ್ತದೆ. ದಿನಾಂಕ: 25/05/2020 ರಂದು ಆನ್‌ಲೈನ್ ದಾಖಲೆ ಪರಿಶೀಲಿಸಲಾಗಿ, ಸೂಚಿಸಿದ ಮಾಹಿತಿ ತಾವು ದಾಖಲಿಸದಿರುವುದು ಕಂಡುಬಂದಿರುತ್ತದೆ.

ಆದ್ದರಿಂದ ತಾವು ಕೋವಿಡ-19 Regulation 2020 ಮತ್ತು ಔಷಧ ಮತ್ತು ಕಾಂತಿವರ್ಧಕ ನಿಯಮಾವಳಿಗಳು 1945ರ ನಿಯಮ 65 ನ್ನು ಉಲ್ಲಂಘಿಸಿರುವುದು ಕಂಡುಬರುತ್ತದೆ.

ಕಾರಣ ಈ ನೋಟಿಸ್ ಸ್ವೀಕರಿಸಿದ ಎರಡು ದಿನಗಳಲ್ಲಿ ಸೂಕ್ತ ಉತ್ತರ ಮತ್ತು ಪೂರಕ ದಾಖಲೆಗಳನ್ನು ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ಕಾನೂನಿನ ಅನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ದಿನಾಂಕ 27/05/2020 ರಂದು ಖುದ್ದು ನೀಡಿದ್ದ ನೋಡೀಸ್ಸಿಗೆ ನಿಮ್ಮಿಂದ ಇದುವರೆಗೂ ಯಾವುದೇ ಉತ್ತರ ಬಂದಿರುವುದಿಲ್ಲ.

## ಆದೇಶ

ಸಂಸ್ಥೆಗೆ ದಿನಾಂಕ 27/05/2020 ರಂದು ಕೋವಿಡ್-19 ಕಾರ್ಯದಡಿ ಮಾಹಿತಿ ದಾಖಲಿಸಲು ಸೂಚಿಸಲಾಗಿತ್ತು ಮತ್ತು ಪ್ರತಿ ದಿನ ದೂರವಾಣಿ ಮೂಲಕ ಸೂಚಿಸಿದ್ದರೂ ಸಹ ದಿನಾಂಕ 11/06/2020 ರಿಂದ 23/06/2020 ರವರೆಗೆ ಯಾವುದೇ ಮಾಹಿತಿ ದಾಖಲಿಸದ ಕಾರಣ ಸಂಸ್ಥೆಯು ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940 ರಡಿ ರೂಪಿಸಿರುವ ನಿಯಮಾವಳಿ 1945ರ ನಿಯಮ 65 (6) ಮತ್ತು ಕೋವಿಡ್-19 ರೆಗ್ಯುಲೇಷನ್ 2020ಅಡಿ ಉಲ್ಲಂಘನೆಗಳಿಗಾಗಿ ಸಂಸ್ಥೆಯ ಪರವಾನಗಿಗಳನ್ನು ದಿನಾಂಕ 06/07/2020 ರಿಂದ 10/07/2020 ರ ವರೆಗೆ ಒಟ್ಟು 05 ದಿನಗಳ ಮಟ್ಟಿಗೆ ಅಮಾನತ್ತುಗೊಳಿಸಿದೆ.

## KA/BNG/4/20-21/205

ಈ ಅವಧಿಯಲ್ಲಿ ನೀವು ಯಾವುದೇ ವಿಧವಾದ ಔಷಧ ವ್ಯಾಪಾರ ವಹಿವಾಟನ್ನು ನಡೆಸಬಾರದೆಂದು ಗಮನಿಸತಕ್ಕದು. ಅಮಾನತ್ತು ಆದೇಶವನ್ನು ನಿಮ್ಮ ಪರವಾನಗಿಗಳಲ್ಲಿ ನಮೂದಿಸಲು ಕೂಡಲೇ ನಿಮ್ಮ ಮೂಲ ಪರವಾನಗಿಗಳನ್ನು ಈ ಕಚೇರಿಗೆ ಸಲ್ಲಿಸುವಂತೆ ಆದೇಶಿಸಿದೆ.

ಸದರಿ ಆದೇಶದ ವಿರುದ್ಧ ತಕರಾರು ಇದ್ದಲ್ಲಿ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ, 1940 ಮತ್ತು ಅದರ ನಿಯಮಾವಳಿಗಳ ನಿಯಮ 66 (2) ರಡಿಯಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ 3 ತಿಂಗಳ ಒಳಗೆ ಮೇಲ್ಮನವಿಯನ್ನು ಸಲ್ಲಿಸಬಹುದಾಗಿದೆ.

(signature) 25/6/20

(ಗೋಣಿ ಫಕ್ಕಿರಪ್ಪ)
ಸಹಾಯಕ ಔಷಧ ನಿಯಂತ್ರಕರು-1,
ಮತ್ತು ಪರವಾನಗಿ ಪ್ರಾಧಿಕಾರಿ,
ಬೆಂಗಳೂರು ವೃತ್ತ-4, ಬೆಂಗಳೂರು.